# ಚೊಕ್ಕ ಚುನಾವಣಾ ಅಭಿಯಾನ

## ಪತ್ರಿಕಾ ಪ್ರಕಟಣೆಗಾಗಿ

### ಕರ್ನಾಟಕ ರಾಜ್ಯದ ರಾಜಕೀಯ ಪಕ್ಷಗಳ ನಾಯಕರಿಗೆ ಚೊಕ್ಕ ಚುನಾವಣೆ ನಡೆಸುವ ಕುರಿತಾಗಿ ಪತ್ರ

ದಿನಾಂಕ: 25-03-2013,

ಸನ್ಮಾನ್ಯರೆ,

### ಚೊಕ್ಕ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕಿಳಿಸುವಂತೆ ಚೊಕ್ಕ ಚುನಾವಣಾ ಅಭಿಯಾನದ ಮನವಿ

ದೇಶದ ಆತ್ಮಸಾಕ್ಷಿಯನ್ನು ಉಳಿಸಿಕೊಳ್ಳಬಯಸುವ ನಾವು ಈ ಹೊಸ ವರ್ಷದಲ್ಲಿ ತಮ್ಮನ್ನು ಸಂಪರ್ಕಿಸಲು ತುಂಬಾ ಹರ್ಷಪಡುತ್ತೇವೆ. ಮೊದಲನೆಯದಾಗಿ ನಮ್ಮ 'ಚೊಕ್ಕ ಚುನಾವಣಾ ಅಭಿಯಾನ'ದ ವತಿಯಿಂದ ತಮಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ನಿಮ್ಮ ಧ್ಯೇಯ ಈಡೇರುವ ದಿಕ್ಕಿನಲ್ಲಿ ಯಶಸ್ಸು ದೊರಕಿ, ಆ ಮೂಲಕ ದೇಶದ ಭವಿಷ್ಯ ಇನ್ನಷ್ಟು ಉಜ್ವಲಗೊಳ್ಳಲಿ, ನಮ್ಮ ರಾಜ್ಯ ಹಾಗೂ ದೇಶದ ಆಡಳಿತ ಆಮೂಲಾಗ್ರವಾಗಿ ಸುಧಾರಣೆ ಹೊಂದುವ ದಿಕ್ಕಿನಲ್ಲಿ ನಾಂದಿ ಹಾಡಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಈಗ ನೇರವಾಗಿ ವಿಷಯಕ್ಕೆ ಬರಲು ದಯಮಾಡಿ ಅನುಮತಿಸಿ. ಭಾರತದ ಅಂತ:ಸಾಕ್ಷಿಯಾಗಿರುವ ಸಂವಿಧಾನದ ಆಶಯವು ಈಡೇರುವುದಕ್ಕೆ ಪೂರಕವಾಗಿಯೇ ನೀವು(ಗಳು) ನಿಮ್ಮ ಜೀವನಪೂರ್ತಿ ಕೆಲಸ ಮಾಡಿದ್ದೀರಿ ಮತ್ತು ಈಗಲೂ ಮಾಡುತ್ತಿದ್ದೀರಿ ಎಂಬುದು ನಮ್ಮ ನಂಬಿಕೆ. ನಮ್ಮ ಸಂವಿಧಾನದ ಆಶಯದ ಮೂಲಸಾರವನ್ನು ನಾವು ಚೊಕ್ಕ (ಅರ್ಥಾತ್ ಪಾರದರ್ಶಕ ಮತ್ತು ನ್ಯಾಯಬದ್ಧ) ಚುನಾವಣಾ ಪದ್ಧತಿಯಲ್ಲಿ ಕೂಡ ಕಾಣುತ್ತೇವೆ.

ನಮ್ಮ ಚುನಾವಣಾ ಪದ್ಧತಿಯಲ್ಲಿ ಹತ್ತು ಹಲವು ದೋಷಗಳಿರುವುದನ್ನು ತಾವೂ ಬಲ್ಲಿರಿ. ಈ ಎಲ್ಲಾ ದೋಷಗಳನ್ನು ಯಾರೇ ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ, ಒಂದು ರಾಜಕೀಯ ಪಕ್ಷ ಸುಧಾರಣೆ ಮಾಡಲು ಸಾಧ್ಯವಿಲ್ಲ. ಆದರೆ, ಚುನಾವಣೆಗೆ ಸಂಬಂಧಿಸಿದ ಎಲ್ಲಾ ಪಾಲುದಾರರು ಈ ವಿಷಯವನ್ನು ಮುಕ್ತ ಮನಸ್ಸಿನಿಂದ ಚರ್ಚೆಗೆ ಗುರಿಪಡಿಸಿ, ಅಗತ್ಯ ತುರ್ತು ಕ್ರಮಗಳನ್ನು ಕೈಗೊಳ್ಳುವ ದಿಕ್ಕಿನಲ್ಲಿ ಹೆಜ್ಜೆ ಹಾಕುವುದಕ್ಕೆ ಯಾವ ಕಡೆಯಿಂದಲೂ ಅಡ್ಡಿಯಿಲ್ಲ ಎಂಬುದು ನಮ್ಮ ತಿಳುವಳಿಕೆ.

ಚುನಾವಣಾ ಪದ್ಧತಿಗೆ ಸಂಬಂಧಿಸಿದಂತೆ ಒಂದು ರಾಜಕೀಯ ಪಕ್ಷದ ಮುಖ್ಯಸ್ಥರಾಗಿ ತಾವೂ ಕೂಡ ಒಬ್ಬ ಪಾಲುದಾರರು. ಈ ಪದ್ಧತಿಯ ದೋಷಗಳನ್ನು ಕಂಡವರು, ಮತ್ತು ಅವುಗಳ ಪರಿಣಾಮಗಳಿಗೆ ತಲೆ ಕೊಟ್ಟವರು ತಾವು. ಹಾಗಾಗಿ, ಈ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವ ವಿಷಯದಲ್ಲಿ ಪುಟ್ಟ-ಪುಟ್ಟ ಹೆಜ್ಜೆಗಳನ್ನಾದರೂ ಇಡಲು ತಾವು ಸಹಜವಾಗಿಯೇ ಸಿದ್ಧರಿದ್ದೀರಿ ಎಂಬ ಪೂರ್ಣ ಭರವಸೆ ನಮಗಿದೆ.

ಇನ್ನೇನು ನಮ್ಮ ರಾಜ್ಯದಲ್ಲಿ ಚುನಾವಣಾ ಪ್ರಕ್ರಿಯೆ ಯಾವ ಕ್ಷಣಕ್ಕೂ ಪ್ರಾರಂಭವಾಗಲಿದೆ. ಈ ಹಂತದಲ್ಲಿ ತಾವು ಈ ದೇಶದ ಸಂವಿಧಾನದ ಮತ್ತು ಚುನಾವಣಾ ಪದ್ಧತಿಯ ಆಶಯ ಮತ್ತು ಗೌರವವನ್ನು ಉಳಿಸುವ ದಿಕ್ಕಿನಲ್ಲಿ ತುರ್ತಾಗಿ ಒಂದು ಹೆಜ್ಜೆ ಇಡುವ ಮೂಲಕ ಇತರರಿಗೆ ತಾವು ಮಾದರಿಯಾಗುವ ಒಂದು ಅವಕಾಶವನ್ನು ತಮ್ಮ ಮಡಿಲಿಗೆ ಹಾಕಿಕೊಳ್ಳಬಹುದು.

ತಮ್ಮ ಪಕ್ಷದಿಂದ ಸ್ಪರ್ಧಿಸಲಿರುವ ಎಲ್ಲಾ ಅಭ್ಯರ್ಥಿಗಳನ್ನು ಚುನಾವಣಾ ಆಯೋಗಕ್ಕಿಂತ ಮುಂಚೆಯೇ ತಾವು ಮತ್ತು ತಮ್ಮ ಪಕ್ಷದ ಹಿರಿಯರ ಮಂಡಳಿಯು ಫಿಲ್ಟರ್ ಮಾಡುವುದು ಒಳಿತು. 'ಚುನಾವಣಾ ಆಯೋಗ ಮಾಡಿದೆ ಎಂಬ ಕಾರಣಕ್ಕೆ ನಾವು ಯಾವುದೇ ಕಾನೂನನ್ನು ಅಥವಾ ನಿಯಮವನ್ನು ಪಾಲನೆ ಮಾಡುವುದಕ್ಕಿಂತ, ಆ ಕಾನೂನು ಅಥವಾ ನಿಯಮದ ಹಿಂದಿನ ಕಾಳಜಿಯನ್ನು ಹೃದಯಕ್ಕೆ ತಂದುಕೊಂಡು, ಅದನ್ನು ಕಾಯಾ-ವಾಚಾ-ಮನಸಾ ಅನುಸರಿಸುವುದು ಮುತ್ಸದ್ದಿಗಳ, ಧೀಮಂತರ ಮತ್ತು ಆರೋಗ್ಯಪೂರ್ಣ ಮನಸ್ಸು ಉಳ್ಳವರ ನಡವಳಿಕೆ' ಎಂಬುದು ತಮಗೆ ತಿಳಿಯದ ವಿಚಾರವೇನೂ ಅಲ್ಲ.

ಆದ್ದರಿಂದ ತಮ್ಮ ಪಕ್ಷದಿಂದ ಟಿಕೆಟ್ ನೀಡಲಿರುವ ಎಲ್ಲಾ ಅಭ್ಯರ್ಥಿಗಳ ವಿಚಾರದಲ್ಲಿ ಕೇವಲ ಕಾನೂನು ಬಯಸುವ ನಿಯಮಗಳನ್ನು ಅನುಸರಿಸುವುದಷ್ಟೇ ಅಲ್ಲದೆ ದೇಶದ ಪ್ರಜಾಪ್ರಭುತ್ವವು ಒಳಗೊಳ್ಳಬೇಕಾದ ಎಲ್ಲಾ ಅಗತ್ಯ ಅಂಶಗಳನ್ನೂ ಅನುಸರಿಸುವ ಬಗ್ಗೆ ಕಾಳಜಿ ವಹಿಸುತ್ತೀರಿ ಎಂದು ನಾವು ಆಶಿಸುತ್ತೇವೆ.

ತಾವಲ್ಲದೆ, ಇನ್ನಾರೂ ಇಂಥಹ ಮಹತ್ತರವಾದ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಿಲ್ಲ. ಭಾರತದ ಸಂಸದೀಯ ಇತಿಹಾಸದಲ್ಲಿ ಒಂದು ಉನ್ನತ ಸ್ಥಾನದಲ್ಲಿ ತಾವು ಇದ್ದೀರಿ; ದೇಶಕ್ಕೊಂದು ಹೊಸ ದಿಕ್ಕನ್ನು ಪರಿಚಯಿಸುವ ಅವಕಾಶ ಮತ್ತು ಸಾಮರ್ಥ್ಯ ತಮ್ಮದಾಗಿದೆ. ಇದು ನಿಜಕ್ಕೂ ಒಂದು ಅತ್ಯುತ್ತಮ ಸಂದರ್ಭ.

ತಾವು ನಮ್ಮ ಈ ಮನವಿಗೆ ಅಂತ:ಕರಣಪೂರ್ವಕವಾಗಿ ಸ್ಪಂದಿಸುತ್ತೀರಿ ಎಂದು ನಮ್ಮ ಹೃದಯ ಹೇಳುತ್ತಿದೆ; ತಾವಾದರೂ ದೇಶದ ಆತ್ಮಸಾಕ್ಷಿಯ ಘನತೆಗೆ ಗೌರವ ತರುವಂಥ ಹೆಜ್ಜೆಗಳನ್ನೇ ಇಡುವವರಲ್ಲವೆ?

ತಮಗೆ, ತಮ್ಮ ಪಕ್ಷಕ್ಕೆ ಮತ್ತು ತಮ್ಮ ಪಕ್ಷದ ಎಲ್ಲಾ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಯಶಸ್ಸು ಸಿಕ್ಕಲಿ; ತಮ್ಮ ಈ ಯಶಸ್ಸಿನಲ್ಲಿ ಪ್ರಜಾಪ್ರಭುತ್ವದ ಕಿರೀಟ ತೊಟ್ಟಿರುವ ತಾಯಿ ಕನ್ನಡಾಂಬೆಗೆ ಘನತೆ–ಗೌರವಗಳು ದಕ್ಕಲಿ ಎಂದು ಆಶಿಸುತ್ತೇವೆ.

**ಚೊಕ್ಕ ಚುನಾವಣಾ ಅಭಿಯಾನದ ಸದಸ್ಯರು**

| Sl.No | Name | Organization Name |
|---|---|---|
| 1. | Justin Johny | The Hunger project |
| 2. | R. Manohar | SICHREM- South India Cell for Human Rights Education & Monitoring |
| 3. | Manjula R. Sathanur | Grama Panchayat Hakkottaya Andolana |
| 4. | Vani M. Gowdar | Grama Panchayat Hakkottaya Andolana |
| 5. | Shivakumar Sharma | Grama Panchayat Hakkottaya Andolana |
| 6. | Ramachandra<br>Senior Journalist | |
| 7. | Padmini Ananth | Sugrama |
| 8. | Bhogaraj | CIEDS collective |
| 9. | I.S. Patil | APSA |
| 10. | Suresh Kantha B. | APSA |
| 11. | G.K. Venkataramayya | Grama Panchayat Hakkottaya Andolana |
| 12. | Chiranjeevi Singh<br>Former Development Commissioner, Government of Karnataka | |
| 13. | Kumar Srigeri | CCL-NLSIU |
| 14. | Cinthia Stephen | Mahila Samakhya Karnataka |
| 15. | Annapoorna Anil Nirawani | Grama Panchayat Hakkottaya Andolana |
| 16. | M. Jambunath | Grama Panchayat Hakkottaya Andolana |
| 17. | C. Narayana Swamy | Karnataka Panchayat Parishad |
| 18. | Kathyayini Chamraj | CIVIC |
| 19. | H.K Bhoomakkanavar | Grama Panchayat Hakkottaya Andolana |

# ಚೊಕ್ಕ ಚುನಾವಣಾ ಅಭಿಯಾನ

| Sl.No | Name | Organization Name |
|---|---|---|
| 20. | D.R. Patil<br>Ex-MLA | |
| 21. | Mangalore Vijay | |
| 22. | Karana | Open Space |
| 23. | B.S. Shivakumar | Grama Panchayat Hakkottaya Andolana |
| 24. | Rajashekar | |
| 25. | Vinay Baindur<br>Researcher, Governance and Decentralisation | |
| 26. | G.B. Suresh | Ranar Research |
| 27. | G. Venkatesh | |
| 28. | P. Vedavyaree | The Hunger Project |
| 29. | Ganesh S.K. | |
| 30. | Chandrashekar | |
| 31. | Shivu Kumar S. | |
| 32. | Maria S. | GCI |
| 33. | Zeena | GCI |
| 34. | Imran Qureshi | |
| 35. | Thrilochan Shastri | ADR,<br>Member of Karnataka Election Watch Advisory Council |
| 36. | Mahima Patel | JH Patel Foundation |
| 37. | Suman Baliga<br>Advocate | |
| 38. | Muruga Mata Swamiji | |
| 39. | Nandana Reddy | The Concerned For Working Children |
| 40. | Damodar Acharya | The Concerned For Working Children |
| 41. | Kavita Ratna | The Concerned For Working Children |
| 42. | Srinivas Ganiga | The Concerned For Working Children |

ಚೊಕ್ಕ ಚುನಾವಣಾ ಅಭಿಯಾನದ ಪರವಾಗಿ,



ನಂದನ ರೆಡ್ಡಿ
ಚೊಕ್ಕ ಚುನಾವಣಾ ಅಭಿಯಾನದ ಕೋರ್ ಕಮಿಟಿ ಸದಸ್ಯರು